## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.

## Crl.Misc. No.393/2024

ಪಿ ಡಬ್ಲ್ಯೂ – 1

| | | |
|---|---|---|
| **ಸಾಕ್ಷಿದಾರರ ಹೆಸರು** | : | ಸುಷ್ಮಾ ಕುದರಿಹಾಳ |
| **ಗಂಡನ ಹೆಸರು** | : | ಹನುಮಂತಪ್ಪ |
| **ವಯಸ್ಸು** | : | 24 ವರ್ಷ |
| **ಉದ್ಯೋಗ** | : | ಮನೆಗೆಲಸ |
| **ವಾಸ** | : | ನೂಕಾಪುರ |

**ದಿನಾಂಕಃ 11–03–2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಸಾಕ್ಷಿದಾರರ ಸ್ವ–ಹೇಳಿಕೆಃ**

ಎದುರುದಾರರು ನನ್ನ ಗಂಡ ಆಗಬೇಕು. ನನ್ನ ಮತ್ತು ಎದುರುದಾರರ ಮದುವೆ ದಿಃ 30–04–2021 ರಂದು ಮೇಡ್ಲೇರಿ ಗ್ರಾಮದ ನನ್ನ ಗಂಡನ ಮನೆಯ ಮುಂದೆ ಹಿರಿಯರ ಸಮ್ಮುಖದಲ್ಲಿ ಹಿಂದೂ ಧರ್ಮ ಪದ್ಧತಿಯಂತೆ ನೇರವೇರಿರುತ್ತದೆ . ಮದುವೆ ಸಮಯದಲ್ಲಿ 1 ಲಕ್ಷ ರೂಪಾಯಿ ನಗದು ಹಣ ಮತ್ತು 5 ತೊಲ ಬಂಗಾರವನ್ನು ಎದುರುದಾರರಿಗೆ ವರೋಪಚಾರವಾಗಿ ನನ್ನ ತವರು ಮನೆಯವರು ಕೊಟ್ಟಿರುತ್ತಾರೆ . ಎದುರುದಾರರ ಮನೆಗೆ ನಾನು ದಾಂಪತ್ಯ ಜೀವನ ನಡೆಸಲು ಹೋಗಿದ್ದು ಅಲ್ಲಿ ನಾನು ಒಂದು ವರ್ಷ ಇದ್ದೆ. ನಂತರ ನನ್ನನ್ನು ಎದುರುದಾರರು ರಾಣೇಬೆನ್ನೂರಿಗೆ ಕರೆದು ಕೊಂಡು ಬಂದು ಇಲ್ಲೆ ಮನೆ ಮಾಡಿದ್ದರು. ಎದುರುದಾರರಿಗೆ ನನ್ನ ಜೊತೆ ಮದುವೆಯಾಗುವುದಕ್ಕಿಂತ ಮುಂಚೆ ರಾಣೇಬೆನ್ನೂರಿನ ಒಬ್ಬ ಹೆಂಗಸಿನೊಂದಿಗೆ ಸಹವಾಸವನ್ನು ಇಟ್ಟುಕೊಂಡಿದ್ದನು. ಅವಳು ಮೇಡ್ಲೇರಿಗೆ ಹೋಗುವುದು ಬರುವುದು ಮಾಡುತ್ತಿದ್ದಳು. ರಾಣೇಬೆನ್ನೂರಿಗೆ ಬಂದ ನಂತರ ಎದುರುದಾರರು ತನ್ನ ಅಕ್ಕ–ತಂಗಿಯರ ಮಾತನ್ನು ಕೇಳಿಕೊಂಡು ಬಂದು ನನ್ನನ್ನು ಹೊಡೆಯುವುದು ಬಡಿಯುವುದು ಮಾಡಲು ಪ್ರಾರಂಭಿಸಿದನು. ಎದುರುದಾರರು ತನ್ನ ಅಕ್ಕನ ಊರಾದ ರಾಹುತನಕಟ್ಟಿ ಗ್ರಾಮಕ್ಕೆ ಕರೆದು ಕೊಂಡು ಹೋಗಿ ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ನನಗೆ ಹೊಡೆಬಡಿ ಮಾಡುತ್ತಿದ್ದನು . ಮತ್ತೆ ರಾಣೇಬೆನ್ನೂರಿನ ಮನೆಗೆ ಬಂದ ನಂತರವೂ ನನಗೆ ಹೊಡೆಬಡಿ ಮಾಡುತ್ತಿದ್ದನು. ಎದುರುದಾರರು ಮತ್ತು ಅವರ ಅಕ್ಕಂದಿರು ನನಗೆ ಹೆಚ್ಚಿನ ಕಿರುಕುಳ

ಕೊಡುತ್ತಿದ್ದರಿಂದ ನಾನು ನನ್ನ ತಂದೆ-ತಾಯಿಗೆ ಫೋನ್ ಮಾಡಿ ಸದರಿ ವಿಷಯವನ್ನು ತಿಳಿಸಿರುತ್ತೇನೆ. ಎದುರುದಾರರು ರಾಣೇಬೆನ್ನೂರಿಗೆ ಬಂದು ಎರಡು ತಿಂಗಳೊಳಗಾಗಿ ಈ ರೀತಿಯಾಗಿ ಕಿರುಕುಳ ಕೊಟ್ಟಿದ್ದನು. ರಾಣೇಬೆನ್ನೂರಿನ ನಮ್ಮ ಅಕ್ಕ-ಪಕ್ಕದ ಮನೆಯವರು ನನ್ನ ತಂದೆ-ತಾಯಿಯವರಿಗೆ ಎದುರುದಾರರು ನನಗೆ ಕೊಡುವ ಕಿರುಕುಳದ ಬಗ್ಗೆ ಹೇಳಿರುತ್ತಾರೆ. ಆಗ ನನ್ನ ತಂದೆ-ತಾಯಿ ಬಂದು ನನ್ನನ್ನು ನನ್ನ ತವರು ಮನೆಗೆ ಕರೆದು ಕೊಂಡು ಹೋಗಿರುತ್ತಾರೆ. ನನಗೆ ಎದುರುದಾರರು ಕೊಡುತ್ತಿರುವ ಕಿರುಕುಳವನ್ನು ನನ್ನ ತಂದೆ-ತಾಯಿ ಯವರಿಗೆ ಹೇಳಿದರೆ ತಾನು ಎಣ್ಣೆ ಕುಡಿದು ಅಥವಾ ನೇಣು ಹಾಕಿಕೊಳ್ಳುತ್ತೇನೆ ಸಾಯುತ್ತೇನೆ ಎಂದು ಹೇಳುತ್ತಿದ್ದನು ಹಾಗಾಗಿ ನಾನು ಸದರಿ ಕಿರುಕುಳದ ವಿಷಯವನ್ನು ನನ್ನ ತಂದೆ-ತಾಯಿಯವರಿಗೆ ಒಂದು ವರ್ಷದವರೆಗೂ ಏನು ಹೇಳಿರುವುದಿಲ್ಲ. ನಾನು ನನ್ನ ತವರು ಮನೆಗೆ ಹೋದಾಗಿನಿಂದ ಎದುರುದಾರ ನನ್ನನ್ನು ನೋಡಲು ಮತ್ತು ಮಾತನಾಡಿಸಲೂ ಸಹ ಬಂದಿರುವುದಿಲ್ಲ. ನಾನು ಜೀವನ ನಡೆಸಲು ನನಗೆ ಯಾವುದೇ ಜೀವನಾಂಶದ ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ನನ್ನನ್ನು ತನ್ನ ಮನೆಗೆ ಕರೆದುಕೊಂಡು ಹೋಗಿರುವುದಿಲ್ಲ. ಎದುರುದಾರನ ಅಜ್ಜನ ಹೆಸರಿನಲ್ಲಿ 5 ಎಕರೆ ಜಮೀನು ಇರುತ್ತದೆ. ಎದುರುದಾರನು ಹೊಲಮನೆ ಕೆಲಸ ಮಾಡುತ್ತಾನೆ ಮತ್ತು ಸ್ವಂತ ಆಟೋ ಇದ್ದು ಬಾಡಿಗೆಗೆ ಓಡಿಸುತ್ತಾನೆ. ಎದುರುದಾರರ ಅಜ್ಜನ ಹೆಸರಿನಲ್ಲಿ ಎರಡು ಮನೆಗಳು ಇವೆ. ಎದುರುದಾರನು ಪ್ರತಿ ತಿಂಗಳು 30 ಸಾವಿರ ರೂಪಾಯಿ ಸಂಪಾದಿಸುತ್ತಾನೆ.

ನನ್ನ ತಂದೆ-ತಾಯಿಗೆ ಮೂರು ಜನ ಮಕ್ಕಳು ಇದ್ದು , ನಾನೇ ದೊಡ್ಡವಳು. ನನ್ನ ತಂದೆ ಕೂಲಿ ಕೆಲಸ ಮಾಡುತ್ತಾರೆ. ನಾನು ಮನೆಯಲ್ಲಿ ಇದ್ದು ಏನೂ ಕೆಲಸ ಮಾಡುವುದಿಲ್ಲ. ನನ್ನ ಜೀವನ ನಿರ್ವಾಹಣೆಗೋಸ್ಕರ ಎದುರುದಾರನಿಂದ ಜೀವನಾಂಶವನ್ನು ಕೊಡಿಸುವಂತೆ ನಾನು ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಈ ಅರ್ಜಿ ಸಲ್ಲಿಸಿದ ನಂತರ ಎದುರುದಾರನು ದಿಃ 24-11-2025 ರಂದು ಕಾವ್ಯಾ ಗಂಗಾಧರ ಕೊಲ್ಕಾರ ರವರನ್ನು ರಿಜಿಸ್ಟರ ಮ್ಯಾರೇಜ್ ಆಗಿರುತ್ತಾನೆ. ನನ್ನ ಜೀವನ ನಿರ್ವಾಹಣೆಗೆ ಮತ್ತು ಬಟ್ಟೆ , ಊಟಕ್ಕೆ ಎದುರುದಾರನಿಂದ ನನಗೆ ಪ್ರತಿ ತಿಂಗಳು 5 ಸಾವಿರ ಜೀವನಾಂಶವನ್ನು ಕೊಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ನಮ್ಮ ವಿವಾಹ ಆಮಂತ್ರಣ ಪತ್ರಿಕೆಯನ್ನು ನಿಪಿ-1 ಎಂದು, ಮದುವೆ ಫೋಟೋವನ್ನು ನಿಪಿ-2 ಎಂದು, ದಿಃ 28-05-2024 ರ ಲಿಗಲ್ ನೋಟಿಸ್ ನ್ನು ನಿಪಿ-3 ಎಂದು , ಅಂಚೆ ರಶೀದಿಯನ್ನು ನಿಪಿ-4 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ-4 ಎಂದು ಗುರುತಿಸಲಾಯಿತು. ಎದುರುದಾರನು ಕಾವ್ಯಾ ಎನ್ನುವ ಹುಡುಗಿಯೊಂದಿಗೆ ರಿಜಿಸ್ಟರ ಮ್ಯಾರೇಜ್ ಆದ ಬಗ್ಗೆ ಮ್ಯಾರೇಜ್ ರಿಜಿಸ್ಟ್ರೇಶನ ಸರ್ಟಿಫಿಕೇಟ್ ನ ಕಂಪ್ಯೂಟರ್ ಪ್ರತಿಯನ್ನು ನಿಪಿ-5 ಎಂದು

ಗುರುತಿಸಲಾಯಿತು.

**ಸಾಕ್ಷಿದಾರರ ಮುಂದುವರೆದ ಸ್ವ–ಹೇಳಿಕೆಗಾಗಿ ಸಮಯವಕಾಶ ಕೋರಿದ್ದರಿಂದ ಮುಂದೂಲಾಯಿತು.** _

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/–

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.